## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ

**ಸಿಸಿ ನಂಬರಃ 1059/2019**

**ಸಿ.ಡಬ್ಲ್ಯೂಃ 3 , ಪಿ.ಡಬ್ಲ್ಯೂಃ 1**

ಸಾಕ್ಷಿದಾರರ ಹೆಸರು : ಮೆಹರಾಜ ಪಿರ್ಜಾದೆ

ತಂದೆಯ ಹೆಸರು : ಮೀರನ್ ಪಿರ್ಜಾದೆ

ವಯಸ್ಸು : 48 ವರ್ಷ

ಉದ್ಯೋಗ : ಮುಂಬಯಿಯಲ್ಲಿ ವ್ಯಾಪಾರ

ವಾಸ್ತವ್ಯ : ಸಿದ್ದೀಕ್ ಸ್ಟ್ರೀಟ್ , ಭಟ್ಕಳ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 23/02/2026**

**ಮುಖ್ಯ ವಿಚಾರಣೆ : ಸರಕಾರಿ ಸಹಾಯಕ ಅಭಿಯೋಜಕರಿಂದ,**

2014 ರಲ್ಲಿ ಚಾಸಾ 1ರವರು ನಸಿಂ ಭಾಗದ ಜಾಲಿ ರಸ್ತೆಯಲ್ಲಿರುವ ಆಸ್ತಿಯ ಕಾಗದ ಪತ್ರದಲ್ಲಿ 10 ಜನ ಸೇರಿ ಮೋಸ ಮಾಡಿದ್ದ ಬಗ್ಗೆ ಖಾಸಗಿ ದೂರನ್ನು ನೀಡಿದ್ದರು. ಆರೋಪಿತರು ನ್ಯಾಯಾಲಯದಲ್ಲಿ ಹಾಜರಿದ್ದು ಅವರನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ. ನನ್ನ ಅಜ್ಜಿಯ ಹೆಸರಿಗೆ ನಕಲಿ ಕಾಗದ ಪತ್ರಗಳನ್ನು ತಯಾರಿಸಿ ಆಸ್ತಿಯನ್ನು ವರ್ಗಾಯಿಸಿದ್ದು ಇರುತ್ತದೆ. ವರ್ಗಾವಣೆಗೊಂಡ ಆಸ್ತಿಯನ್ನು ನನ್ನ ಅಜ್ಜ ಆರೋಪಿ 11 ರವರಿಗೆ ವರ್ಗಾಯಿಸಿದ್ದು ನನಗೆ ತಿಳಿದಿರುತ್ತದೆ. ಈ ಕುರಿತು ನನ್ನ ಸಹೋದರ ಚಾಸಾ 1 ರವರು ಖಾಸಗಿ ದೂರನ್ನು ಈ ನ್ಯಾಯಾಲಯಕ್ಕೆ ನೀಡಿರುತ್ತಾರೆ.

**ಪಾಟೀ ಸವಾಲು : 1 ರಿಂದ 4, 6, 8 ಮತ್ತು 9 ನೇ ಆರೋಪಿ ಪರ ಶ್ರೀ ಕೆ ಹೆಚ್ ಎನ್ ವಕೀಲರಿಂದ**

ಸದರಿ ಪ್ರಕರಣದಲ್ಲಿ ನನ್ನ ಸಹಿಯನ್ನು ಗಿಫ್ಟ ಡೀಡ್ ನಲ್ಲಿ ಹಾಕಲಾಗಿದೆ. ನನ್ನ ಸಮಕ್ಷಮ ಈ ಪ್ರಕರಣಕ್ಕೆ ಸಂಬಂಧಿಸಿದ ಯಾವುದೇ ದಾಖಲೆಗಳು ರಚನೆಯಾಗಿದ್ದು ಇಲ್ಲಾ. ನಮ್ಮ ನಡುವೆ ಸಿವಿಲ ಪ್ರಕರಣ ಈಗಲೂ ಚಾಲ್ತಿಯಲ್ಲಿ ಇದೆ . ಸಿವಿಲ್ ದಾವೆ ನಾನೇ ದಾಖಲಿಸಿದ್ದು ಅದರ ಪಲಿತಾಂಶ ಈಗಲೂ ಬಾಕಿ ಇದೆ. ಸದರಿ ಆಸ್ತಿಯ ಪ್ರಕರಣದಿಂದ ಆರೋಪಿತರ ನಡುವೆ ನನ್ನ ಸಂಬಂಧವು ಅಷ್ಟಕಷ್ಟೇ ಇದೆ. ಆಸ್ತಿಗೆ ಸಂಬಂಧಿಸಿದಂತೆ ನಮ್ಮ ನಡುವೆ ತಕರಾರು ಇದ್ದ ಕಾರಣ ಆರೋಪಿತರ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ದೂರಿನಲ್ಲಿ ಬರೆದ ವಿಷಯ ಸುಳ್ಳು ಎಂದರೆ ಸರಿಯಲ್ಲ. ಚಾಸಾ 1 ರವರು ನನ್ನ ತಮ್ಮ ಆಗಿರುತ್ತಾರೆ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ್ದ ವಿಚಾರ

ಸುಳ್ಳು ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ನಕಲಿ ಸಹಿಯನ್ನು ಸೃಷ್ಟಿ ಮಾಡಿದ್ದು ಇಲ್ಲಾ ಎಂದರೆ ಸರಿಯಲ್ಲ. ನ್ಯಾಯಾಲಯದಲ್ಲಿ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು : 7 ನೇ ಆರೋಪಿ ಪರ ವಕೀಲರು 1 ರಿಂದ 4, 6, 8 ಮತ್ತು 9 ನೇ ಆರೋಪಿ ಪರ ವಕೀಲರು ಮಾಡಿದ ಪಾಟೀ ಸವಾಲನ್ನೇ ಆಳವಡಿಸಿಕೊಂಡಿರುತ್ತಾರೆ.</u>**

**ಮರುವಿಚಾರಣೆ ಇಲ್ಲ.**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

ಸಹಿ ಇದೆ

**ಪ್ರ.ದ.ನ್ಯಾ.ದಂ., ಭಟ್ಕಳ.**